ಓ.ಎಸ್.309/2022 ಪಿ.ಡಬ್ಲು-3
*ಅಮರೇಶಪ್ಪ ತಂದೆ ಭೀಮರಾಯ*

ದಿ. 04-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು ಶ್ರೀ ಎಮ್.ಸಿ.ಪಿ ವಕೀಲರಿಂದ:-</u>**

ಈ ದಾವೆಯನ್ನು ನಾವೇ ಹಾಕಿರುತ್ತೇವೆ. ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು 5ನೇ ತರಗತಿವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಮತ್ತು 3-4 ಜನ ಸೇರಿ ಈ ದಾವೆಯನ್ನು ಗುರುಲಿಂಗಯ್ಯಸ್ವಾಮಿ ರವರ ವಿರುದ್ಧ ಹಾಕಿರುತ್ತೇವೆ. ಸರ್ವೆ ನಂ.36, 04, 38 ಜಮೀನುಗಳ ದಾರಿ ಸಲುವಾಗಿ ಈ ದಾವೆ ಹಾಕಿರುತ್ತೇವೆ. ಸ್ಮಶಾನಕ್ಕೆ ಹೋಗಲು ಅಲ್ಲಿ ದಾರಿ ಇರುತ್ತದೆ. ಸರ್ವೆ ನಂ.36 ರಲ್ಲಿ ಅಮರೇಶಪ್ಪ ಮತ್ತು ಯಂಕಪ್ಪ ಇರುತ್ತಾರೆ. ಸರ್ವೆ ನಂ.38 ಜಮೀನು ನಮ್ಮ ಹೆಸರಿನಲ್ಲಿದೆ. ಅದರಲ್ಲಿ 26 ಗುಂಟೆ ನನ್ನ ತಮ್ಮನಿಗೆ ಬಿಟ್ಟು ಕೊಟ್ಟಿರುತ್ತೇನೆ. ಸರ್ವೆ ನಂ.04, 36, ಮತ್ತು 38 ಬಿಟ್ಟು ಬೇರೆ ಸರ್ವೆ ನಂ.37 ರ ಮೇಲೆ ಕೇಸು ಹಾಕಿರುತ್ತೇವೆ. ಸರ್ವೆ ನಂ.37 ಚಂದ್ರಶೇಖರ್ ರವರ ಹೆಸರಿನಲ್ಲಿದೆ. ಸರ್ವೆ ನಂ.37 ಪ್ರತಿವಾದಿಯ ಹೆಸರಿನಲ್ಲಿ ಇಲ್ಲ ಎಂದರೆ ಸಾಕ್ಷಿಯು ಸರ್ವೆ ನಂ.2 ರಿಂದ 37 ಕ್ಕೆ ಹೋಗಲು ದಾರಿ ಇರುತ್ತದೆ ಎನ್ನುತ್ತಾರೆ. ಎಲ್ಲರ ಮೇಲೆ ನಾವು ಈ ದಾವೆಯನ್ನು ಹಾಕಿರುತ್ತೇವೆ.

2. ನಾನು 2016 ರಿಂದ 2020 ವರೆಗೆ ಪಂಚಾಯತಿ ಸದಸ್ಯ ಆಗಿದ್ದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಏನೇನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಅದರಲ್ಲಿ ಎಲ್ಲಿಯೂ ಸಹ ನಾನು ಪ್ರತಿವಾದಿಯ ವಿರುದ್ಧ ಕೇಸು ಹಾಕಿದ ಬಗ್ಗೆ ನಾನು ಹೇಳಿರುವುದಿಲ್ಲ. ಇದೇ ಪ್ರಥಮ ಬಾರಿಗೆ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನನ್ನ ಜಮೀನಿಗೆ ದಾರಿ ಹೋಗಿ ಬರುವ ಸಲುವಾಗಿ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ನಾನೇ ಬಂದಿರುತ್ತೇನೆ.

3. ಈಗ್ಗೆ 3 ವರ್ಷಗಳ ಹಿಂದೆ ನಾನು ಪ್ರತಿವಾದಿಯನ್ನು ಬೇಟಿಯಾಗಿ ದಾರಿ ಕೊಡಲು ಕೇಳಿಕೊಂಡಿರುತ್ತೇನೆ. ನಮ್ಮೂರಿನಿಂದ ಸ್ಮಶಾನಕ್ಕೆ ಹೋಗಲು ಬೇರೆ ದಾರಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಯರಿಗೆ ಯಾವುದೇ ಅಡೆತಡೆ ಮಾಡಿಲ್ಲ ನಮ್ಮ ಜಮೀನಿಗೆ ಹೋಗುವ ಸಲುವಾಗಿ ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.